# ಸಾಧನೆಯ ಹಾದಿಯಲ್ಲಿ...

## ಪ್ರೇಮಮಾರ್ಗ

### ಪ್ರೀತಿಯಿಂದ ಭಕ್ತಿಗೆ

ನಮ್ಮಲ್ಲಿ ಬಹು ಜನರಿಗೆ ಆಹಾರ, ವಸ್ತ್ರ, ವಸತಿಗಳ ಕೊರತೆ ಇಲ್ಲ. ಆರಾಮವಾಗಿರುವುದಕ್ಕೆ ಬೇಕಾದ ಹಲವಾರು ಸಾಧನಗಳ, ಸೌಲಭ್ಯಗಳ ಅಭಾವವೂ ಇಲ್ಲ. ನಾವು ಕೇವಲ ಭೌತಿಕ ವಸ್ತುಗಳಲ್ಲಿಯೇ ಆನಂದದಿಂದ ಇರಬಲ್ಲೆವಾದರೆ, ಅದಕ್ಕೆ ಬೇಕಾದ ಸಂಗತಿಗಳೆಲ್ಲ ನಮ್ಮಲ್ಲಿ ಇದೆ. ಆದರೂ ನಾವು ಸಂತೋಷವಾಗಿ ಇರಲಾರೆವು. ಯಾವುದೋ ಒಂದು ಕೊರತೆಯಿಂದ ಯಾವಾಗಲೂ ಬಳಲುವೆವು. ಅದು ಯಾವುದು?

ಮನೋವೈಜ್ಞಾನಿಕ ದೃಷ್ಟಿಯಿಂದ ನೋಡಿದರೆ, ಇಂದಿನ ಸಮಾಜ ಭೌತಿಕ ವಸ್ತುಗಳ ಅಭಾವದಿಂದ ಬಳಲುತ್ತಿಲ್ಲ. ಅದಕ್ಕೆ ಬದಲಾಗಿ, ಮಾನವೀಯ ಮೌಲ್ಯಗಳ ಕೊರತೆಯಿಂದ ನರಳುತ್ತಿದೆ. ವ್ಯಕ್ತಿಯೊಬ್ಬ ಮತ್ತೊಬ್ಬ ವ್ಯಕ್ತಿಯೊಡನೆ ಇಟ್ಟುಕೊಂಡಿರುವ ಸಂಬಂಧ ಬರಿಯ ಭೌತಿಕವಾಗಿರಬಾರದು. ಅದು ಮಾನವೀಯ ಮೌಲ್ಯಗಳ ಮೇಲೆ ಆಧಾರಿತವಾಗಿರಬೇಕು. ಹಾಗಿಲ್ಲದಿರುವುದೇ ನಮ್ಮೆಲ್ಲ ಬವಣೆಗಳಿಗೆ ಕಾರಣ.

> ನಾವೆಲ್ಲ ಸ್ವಾರ್ಥ ಪ್ರೀತಿಯಿಂದ ಮೊದಲು ಮಾಡುತ್ತೇವೆ. ಕ್ಷುದ್ರ ಜೀವಿಯ ಬೇಡಿಕೆ ಪ್ರೀತಿಯನ್ನು ಕೂಡ ಸ್ವಾರ್ಥತೆಗೆ ಇಳಿಸುತ್ತದೆ. ಅಂತೂ ಕೊನೆಗೆ ಭಗವತ್‌ಪ್ರೇಮದ ಸೂರ್ಯೋದಯವಾಗುತ್ತದೆ. ಆಗ ಈ ಅಲ್ಪಾತ್ಮವು ಪರಮಾತ್ಮನಲ್ಲಿ ಒಂದಾಗುತ್ತದೆ. ಆ ಪ್ರೇಮಜ್ಯೋತಿಯ ಸಾನ್ನಿಧ್ಯದಲ್ಲಿ ಭಕ್ತನೂ ಪರಿವರ್ತನೆಯನ್ನು ಹೊಂದುತ್ತಾನೆ. ಕೊನೆಗೆ ಪ್ರೀತಿ, ಪ್ರಿಯ, ಪ್ರಿಯತಮ ಎಲ್ಲವೂ ಒಂದೇ ಎಂಬ ಅಮೋಘವಾದ ಅದ್ಭುತವಾದ ಸತ್ಯವನ್ನು ಸಾಕ್ಷಾತ್ಕಾರ ಮಾಡಿಕೊಳ್ಳುತ್ತಾನೆ.
>
> *–ಸ್ವಾಮಿ ವಿವೇಕಾನಂದ*

ಮಾನವನು ಮೂಲಭೂತವಾಗಿ ಬಯಸುವ ಮೌಲ್ಯಗಳಲ್ಲಿ ಪ್ರೀತಿ ಅಥವಾ ಪ್ರೇಮವೂ ಒಂದು. ಪ್ರೀತಿಯನ್ನು ಬಯಸುವವನೂ ಅವನೇ; ಅದನ್ನು ಕೊಡಬಲ್ಲವನೂ ಅವನೇ. ಹೀಗೆ ಪ್ರೀತಿ ಎನ್ನುವುದು ನಮ್ಮ ಸಹಜ ಗುಣ. ಅದನ್ನು ನಮಗೆ ಯಾರೂ ಹೇಳಿಕೊಡಬೇಕಾಗಿಲ್ಲ. ಆದರೆ ನಮ್ಮ ಪ್ರೀತಿ ಸೀಮಿತವಾದುದು. ನಾವು ಎಲ್ಲರನ್ನೂ ಸಮನಾಗಿ ಪ್ರೀತಿಸಲಾರೆವು ಹಾಗೂ ನಮ್ಮ ಪ್ರೀತಿಗೆ ಪ್ರತಿಯಾಗಿ ಪ್ರೀತಿಯನ್ನು ಅಪೇಕ್ಷಿಸುವೆವು. ಅದು ದೊರಕದಿದ್ದರೆ ನಮಗೆ ದುಃಖ ಉಂಟಾಗುವುದು. ಪ್ರೀತಿಗೆ ಎಲ್ಲಿ ಧಕ್ಕೆ ಬರುವುದೋ ಎಂಬ ಭಯ ಕೂಡ ಉಂಟಾಗುವುದು. ಬೇರೆ ಯಾರಾದರೂ ನಮ್ಮ ಪ್ರೀತಿಯಲ್ಲಿ ಸ್ಪರ್ಧೆ ಮಾಡುವರೋ ಎಂಬ ಅಸೂಯೆ ಮತ್ತು ಶಂಕೆ ಇರುವುದು. ಹೀಗಾಗಿ ನಾವು ಮಾಡುವ ಪ್ರೀತಿಯು ಆನಂದಕ್ಕಿಂತ ಹೆಚ್ಚಾಗಿ ಆತಂಕವನ್ನೇ ಹೊತ್ತು ತರುವುದು.

ಇದಕ್ಕೆ ಕಾರಣವೂ ಸ್ಪಷ್ಟವಾಗಿಯೇ ಇದೆ. ನಾವು ಮಾಡುವ ಪ್ರೀತಿ ವ್ಯವಹಾರದ ಹಾಗಿದೆ. ಅಂಗಡಿಗೆ ಹೋಗುತ್ತೇವೆ. ಹಣ ಕೊಟ್ಟು ವಸ್ತುವನ್ನು ಕೊಳ್ಳುತ್ತೇವೆ. ಇದರಲ್ಲಿ ಯಾವ ಭಾವನೆಯೂ ಇಲ್ಲ. ಯಾವ ಮಾನವೀಯ ಮೌಲ್ಯವೂ ಇಲ್ಲ. ಇದೊಂದು ಸಮಾಜ ಕಲ್ಪಿಸಿಕೊಂಡಿರುವ ವ್ಯವಸ್ಥೆ, ಅಷ್ಟೆ. ಹಾಗೆಯೇ ನಮ್ಮ ಸಂಬಂಧಗಳು ಮತ್ತು ಆ ಸಂಬಂಧಗಳಿಗೆ ಬೆಸುಗೆ ಹಾಕಿರುವ ಸಂವೇದನೆಗಳು ಕೂಡ. ಅವುಗಳಿಗೆ ಹೊಂದಬೇಕಾದ ಉನ್ನತವಾದ ಉದ್ದೇಶವಾಗಲಿ, ಸಾಗಬೇಕಾದ ಪರಿಪೂರ್ಣ ಗುರಿಯಾಗಲಿ, ಪಡೆಯಬೇಕಾದ ಉತ್ಕೃಷ್ಟ ಫಲದ ಬಯಕೆಯಾಗಲಿ ಇಲ್ಲ. ಆ ಸಂಬಂಧಗಳು ಮತ್ತು ಸಂವೇದನೆಗಳು ಭೌತಿಕ ಯಶಸ್ಸಿನ ಹಾಗೂ ಸಮೃದ್ಧಿಯ ಮೇಲೆ ಅವಲಂಬಿತವಾಗಿವೆ. ಆ ಭೌತಿಕತೆಯೋ ಹೃದಯವಿಹೀನವಾದುದು; ಶುಷ್ಕವಾದುದು; ಅನಿತ್ಯವಾದುದು; ಕೇವಲ ದುಃಖವನ್ನು ತಂದುಕೊಡುವಂಥದ್ದು.

ಇದಕ್ಕೆ ಪರಿಹಾರ ಏನು? ನಮ್ಮ ಸ್ವಭಾವಸಹಜವಾದ ಪ್ರೀತಿಯ ಭಾವನೆಯನ್ನು ಉನ್ನತ ಮಟ್ಟಕ್ಕೆ ಏರಿಸುವುದು. ಆ ಹಂತದಲ್ಲಿ ನಾವು ಬರಿ ಕೊಡುವವನ ಸ್ಥಾನದಲ್ಲಿ ಇರುತ್ತೇವೆ. ಏನನ್ನೂ ಅಪೇಕ್ಷಿಸುವುದಿಲ್ಲ. ಆಗ ನಾವು ಯಾವುದಕ್ಕೂ ಭಯ ಪಡುವುದಿಲ್ಲ. ಹಾಗೆಯೇ ಅಲ್ಲಿ ಸ್ಪರ್ಧೆ, ಅಸೂಯೆಗಳಿಗೆ ಅವಕಾಶವೇ ಇಲ್ಲ. ಆ ಅನಂತ ಅಮೃತ ಪ್ರೇಮಪ್ರವಾಹದಲ್ಲಿ ಮಿಂದು ಧನ್ಯರಾಗುವ ಸೌಭಾಗ್ಯ ಎಲ್ಲರಿಗೂ ಉಂಟು. ಇಲ್ಲಿ ನಮ್ಮ ಪ್ರೀತಿಗೆ ಭೌತಿಕ ಸಂಬಂಧಗಳು ಮತ್ತು ಸಂವೇದನೆಗಳು ಆಧಾರವಾಗಿರುವುದಿಲ್ಲ. ಅದಕ್ಕೆ ಬದಲಾಗಿ ಅವನ್ನೂ ಮೀರಿದ ಅನಂತ ನಿತ್ಯ ಆಧ್ಯಾತ್ಮಿಕ ಸತ್ಯವೇ ಆಧಾರವಾಗಿರುತ್ತದೆ. ಹೀಗಾಗಿ ಪ್ರೀತಿಯೂ ಅನಂತವಾಗಿರುತ್ತದೆ, ನಿತ್ಯವಾಗಿರುತ್ತದೆ, ಸತ್ಯವಾಗಿರುತ್ತದೆ. ಅದಕ್ಕೆಂದೇ ನಾರದರು ಇದನ್ನು **ಸಾ ತು ಅಸ್ಮಿನ್ ಪರಮಪ್ರೇಮರೂಪಾ** – ಇದು ಪರಮಪ್ರೇಮರೂಪವಾದುದು ಎಂದು ಬಣ್ಣಿಸುತ್ತಾರೆ.

ಮೇಲೆ ಹೇಳಿದ ಅನಂತ ನಿತ್ಯ ಆಧ್ಯಾತ್ಮಿಕ ಸತ್ಯವನ್ನೇ ನಾವು **ಭಗವಂತ** ಅಥವಾ **ಈಶ್ವರ**ನೆಂದು ಕರೆಯುವುದು; ಆತನೇ ಆಧಾರವಾಗಿ, ಆತನೇ ಲಕ್ಷ್ಯವಾಗಿ ಪ್ರವಹಿಸುವ ಪ್ರೇಮಧಾರೆಯನ್ನೇ **ಭಕ್ತಿ** ಎಂದು ಹೆಸರಿಸುವುದು. ಹಾಗೆಂದೇ ಭಾಗವತ ಹೇಳುತ್ತದೆ, **ಸ್ವಾರ್ಥವಾಸನೆಗಳಿಲ್ಲದ ಪ್ರೇಮದಿಂದ ತೊಯ್ದು, ಶ್ರೀಹರಿಯ ಕಡೆಗೆ ಅವಿಚ್ಛಿನ್ನವಾಗಿ ಹರಿಯುತ್ತಿರುವ ಮನೋಗತಿಯೇ ಭಕ್ತಿ.**

ಪ್ರೇಮವೇ ಇದರ **ಸಾಧನ.** ಆತ್ಯಂತಿಕ ಪರಮಪ್ರೇಮದ ಗಳಿಕೆಯೇ ಇದರ **ಸಿದ್ಧಿ. ಸಹಜಪ್ರೇಮದ ಮೂಲಕ ಪರಮಪ್ರೇಮದ ಗಳಿಕೆ** – ಇದೇ ಈ ಮಾರ್ಗದ ಸಾರಸರ್ವಸ್ವ. ಇಲ್ಲಿ ಮುಕ್ತಿ

ಗುರಿಯಲ್ಲ. ಭಕ್ತಿ ಮಾತ್ರ ಗುರಿ. ಭಗವಂತನಲ್ಲಿ ಒಂದಾಗುವುದು ಇದರ ಉದ್ದೇಶವಲ್ಲ. ಭಗವದಾನಂದವನ್ನು ಸರ್ವದಾ ಸವಿಯುತ್ತಿರುವುದೇ ಇದರ ಉದ್ದೇಶ.

## ಭಕ್ತಿಯ ಸ್ವರೂಪ

ನಾರದರು ಭಕ್ತಿಯು ಅಮೃತದಂತೆ ಇದೆ ಎಂದು ಹೇಳುತ್ತಾರೆ. ಅಮೃತ ರುಚಿಯಾಗಿರುತ್ತದೆ. ಅದು ನಿತ್ಯ ಆನಂದದಾಯಕ. ಇದೇ ರೀತಿ ಭಕ್ತಿ ಕೂಡ. ಅದನ್ನು ಪಡೆದು ಮನುಷ್ಯನು ಸಿದ್ಧನಾಗುತ್ತಾನೆ. ಮೃತ್ಯುವನ್ನೂ ಮೆಟ್ಟಿ ನಿಲ್ಲುತ್ತಾನೆ. ಆತ್ಯಂತಿಕ ತೃಪ್ತಿಯನ್ನು ಹೊಂದುತ್ತಾನೆ. ಈ ಸ್ಥಿತಿಯಲ್ಲಿ ಭಕ್ತ ಏನನ್ನೂ ಬಯಸುವುದಿಲ್ಲ. ಯಾವುದಕ್ಕೂ ದುಃಖಪಡುವುದಿಲ್ಲ. ಯಾರನ್ನೂ ದ್ವೇಷಿಸುವುದಿಲ್ಲ. ಭಗವಂತನನ್ನು ಬಿಟ್ಟು ಯಾವುದನ್ನೂ ಆಶಿಸುವುದಿಲ್ಲ. ಭಕ್ತಿಯ ಪ್ರಭಾವದಿಂದ ಅವನು ಮುಕ್ತನಾಗುತ್ತಾನೆ; ಸ್ತಬ್ಧನಾಗುತ್ತಾನೆ; ಆತ್ಮಾರಾಮನಾಗುತ್ತಾನೆ. ಇದು ಭಕ್ತಿಯ ಬಗ್ಗೆ ನಾರದರ ಇಂಗಿತ.

ಶಾಂಡಿಲ್ಯರೆಂಬ ಮಹರ್ಷಿಗಳು ಹೀಗೆ ಹೇಳುತ್ತಾರೆ: ಮೊದಲು ಭಕ್ತನು ಭಗವಂತನ ಮಹಿಮೆಯನ್ನು ಅರಿಯಬೇಕು. ಆಗ ಅವನಲ್ಲಿ ನಿಷ್ಠೆ ಬರುತ್ತದೆ. ಪ್ರೀತಿ ಉಕ್ಕುತ್ತದೆ. ಈ ಬಗೆಯ ಭಕ್ತಿಗೆ ಅನುರಕ್ತಿ ಎಂದು ಹೆಸರು.

ಊಟ ಮಾಡಿದರೆ ಮೂರು ಪ್ರಯೋಜನಗಳು ಒಂದೇ ಸಮಯಕ್ಕೆ ಆಗುತ್ತವೆ. ಮನಸ್ಸಿಗೆ ತೃಪ್ತಿಯಾಗುತ್ತದೆ. ದೇಹಕ್ಕೆ ಪುಷ್ಟಿಯಾಗುತ್ತದೆ. ಹಸಿವೆ ನೀಗುತ್ತದೆ. ಹಾಗೆಯೇ ಭಕ್ತಿಯೂ ಕೂಡ. ಇದರಿಂದ ನಮ್ಮಲ್ಲಿರುವ ಭಕ್ತಿ ಹೆಚ್ಚಾಗುತ್ತ ಹೋಗುತ್ತದೆ. ಭಗವಂತನ ಸಾಕ್ಷಾತ್ಕಾರವಾಗುತ್ತದೆ. ಪ್ರಾಪಂಚಿಕ ವಸ್ತುಗಳಲ್ಲಿ ವೈರಾಗ್ಯ ಮೂಡುತ್ತದೆ. ಇವು ಮೂರೂ ಒಮ್ಮೆಲೇ ಆಗುತ್ತವೆ. ಇದರಿಂದ ಭಕ್ತನು ಪರಮ ಶಾಂತಿಯನ್ನು ಪಡೆಯುತ್ತಾನೆ. ಎಲ್ಲ ಪ್ರಾಪಂಚಿಕ ಅವಲಂಬನೆಯನ್ನು ಬಿಟ್ಟುಬಿಡುತ್ತಾನೆ. ಬೆಂಕಿಯಲ್ಲಿ ಪುಟವಿಟ್ಟ ಚಿನ್ನ ಕೊಳೆಯನ್ನು ಕಳೆದುಕೊಳ್ಳುತ್ತದೆ; ತನ್ನ ನಿಜರೂಪವನ್ನು ಪಡೆದುಕೊಳ್ಳುತ್ತದೆ. ಹಾಗೆ ಭಕ್ತಿಯ ಮೂಲಕ ಭಕ್ತನು ಹಿಂದಿನ ಕರ್ಮವಾಸನೆಯನ್ನು ಕೊಡವಿ ಹಾಕುತ್ತಾನೆ. ಭಗವಂತನನ್ನು ಪಡೆಯುತ್ತಾನೆ. ಇದಿಷ್ಟು ಭಾಗವತದಲ್ಲಿ ಹೇಳಿರುವ ಕೆಲವು ವಿಚಾರಗಳು.

ಶ್ರೀರಾಮಕೃಷ್ಣರು ಭಕ್ತಾಗ್ರೇಸರರು. ಅವರು ಹೀಗೆ ಹೇಳುತ್ತಾರೆ, "ಭಗವದಾನಂದದ ರುಚಿಯನ್ನು ಒಬ್ಬ ಒಮ್ಮೆ ಪಡೆದರೆ ಸಾಕು. ಆ ಆನಂದಕ್ಕೆ ಹಪಹಪಿಸುತ್ತಾನೆ. ಆಗ ಪ್ರಪಂಚ ಅವನಿಗೆ ನಿಸ್ಸಾರವಾಗಿ ಕಾಣುತ್ತದೆ." "ಭಕ್ತಿ ಎಂದರೆ ಭಗವಂತನಿಗಾಗಿ ಎಲ್ಲ ಕರ್ಮಗಳನ್ನೂ ಮಾಡುವುದು. ಅವೆಲ್ಲವನ್ನೂ ಅವನಲ್ಲಿ ಸಮರ್ಪಿಸಿಬಿಡುವುದು. ಭಗವಂತನನ್ನು ಮರೆತ ಮರುಗಳಿಗೆಯೇ ವ್ಯಾಕುಲವನ್ನು ಹೊಂದುವುದು."

## ಬದುಕುವ ಕಲೆ

ನಮಗೆ ಪ್ರಿಯರಾದವರ ಬಗ್ಗೆ ನಾವು ಎಷ್ಟೊಂದು **ಕಾಳಜಿ** ತೋರುತ್ತೇವೆ! ಅವರಿಗಾಗಿ ಮಾಡುವ ಕಾರ್ಯಗಳನ್ನು ಎಷ್ಟು **ನಿಷ್ಠೆ**ಯಿಂದ ಮಾಡುತ್ತೇವೆ! ಅವರ **ನೆನಪು** ಎಷ್ಟು ಸಲ ಮರುಕಳಿಸುತ್ತಲೇ ಇರುತ್ತದೆ! ಅವರನ್ನು ಸಂತೋಷವಾಗಿ ಇಡಬೇಕು ಎಂಬ **ಆಸೆ** ಅದೆಷ್ಟು ಬಗೆಯಲ್ಲಿ ಮನಸ್ಸಿನಲ್ಲಿ ಮೂಡುತ್ತದೆ! ಈ ಬಗೆಯ **ಕಾಳಜಿ, ನಿಷ್ಠೆ, ನೆನಪು, ಆಸೆ** – ಇವೆಲ್ಲವನ್ನೂ ಭಗವಂತನ ಕಡೆಗೆ ಹರಿಸಲು ಸಾಧ್ಯವಾದರೆ ಅದನ್ನೇ ಭಕ್ತಿ ಎಂದು ಕರೆಯುವುದು. ಹೀಗೆ **ಭಕ್ತಿ** ಎನ್ನುವುದು ಬರಿಯ ಭಾವನೆಯಲ್ಲ. ಅದೊಂದು ಜೀವನವಿಧಾನ; ನಾವು ಇಷ್ಟಪಟ್ಟು ಆಯ್ಕೆಮಾಡಿಕೊಂಡ ಬದುಕುವ ಕಲೆ.

ಇದು ನಮಗೆ ಲೌಕಿಕ ಸ್ತರದಲ್ಲಿಯೂ ಬಹಳ ಅವಶ್ಯ. ನಾವು ಮಾಡುವ ಎಲ್ಲ ಕಾರ್ಯಗಳನ್ನು ಪ್ರೀತಿಯಿಂದ ಮಾಡಬೇಕು. ನಮ್ಮ ಕುಟುಂಬದವರಲ್ಲಿ, ನೆರೆಹೊರೆಯವರಲ್ಲಿ, ಇತರರಲ್ಲಿ ಪ್ರೀತಿಯಿಂದ ನಡೆದುಕೊಳ್ಳಬೇಕು. ಇಂಥ ಪ್ರೀತಿಗೆ ಭಗವಂತನ ಮೇಲಿನ ಭಕ್ತಿ ಆಧಾರವಾಗಿದ್ದರೆ ಎಷ್ಟು ಚೆನ್ನ! ದೇವರ ಮೇಲಿನ ಭಕ್ತಿಯು ಹೀಗೆ ಲೌಕಿಕವಾಗಿಯೂ ಪ್ರಯೋಜನಕ್ಕೆ ಬರುತ್ತದೆ; ಸಾಧಾರಣ ಪ್ರೀತಿಯನ್ನು ಉನ್ನತವಾಗಿಸುತ್ತದೆ; ವಿಶಾಲವನ್ನಾಗಿಸುತ್ತದೆ; ನಿಸ್ವಾರ್ಥವನ್ನಾಗಿಸುತ್ತದೆ. ಆ ಮೂಲಕ ಬದುಕನ್ನು ಆನಂದಮಯವನ್ನಾಗಿಸುತ್ತದೆ.

ಭಾಗವತದಲ್ಲಿ ಇದೇ ಭಾವನೆ ಹೊರಹೊಮ್ಮಿದೆ. ಕಪಿಲ ಮುನಿ ತನ್ನ ತಾಯಿ ದೇವಹೂತಿಗೆ ಹೀಗೆ ಉಪದೇಶ ಮಾಡುತ್ತಾನೆ: ಮನುಷ್ಯನ ವ್ಯಕ್ತಿತ್ವದಲ್ಲಿ ಮೂರು ಅಂಶಗಳಿವೆ. ಜ್ಞಾನಾಂಗಗಳು, ಕರ್ಮಾಂಗಗಳು ಮತ್ತು ಮನಸ್ಸು. ಇವುಗಳ ಶಕ್ತಿಗಳನ್ನು ಬಳಸಿಕೊಂಡೇ ನಾವು ನಮ್ಮೆಲ್ಲ ಕೆಲಸಕಾರ್ಯಗಳನ್ನು ಮಾಡುವುದು. ಅವುಗಳೆಲ್ಲದರ ಶಕ್ತಿಗಳನ್ನು ಒಟ್ಟುಗೂಡಿಸಬೇಕು. ಒಮ್ಮುಖ ಮಾಡಬೇಕು. ಒಂದೇ ರೀತಿಯ ಮಾನಸಿಕ ವೃತ್ತಿಯನ್ನಾಗಿ ಮಾರ್ಪಡಿಸಬೇಕು. ಅಂಥ ಅಖಂಡವೃತ್ತಿಯು ಪರಮಪುರುಷನಾದ ಭಗವಂತನ ಕಡೆಗೆ ಸಹಜವಾಗಿ, ಯಾವ ಪ್ರಯತ್ನವಿಲ್ಲದೆಯೇ ಹರಿಯಬೇಕು. ಆಗ ಶ್ರೇಷ್ಠ ಮಟ್ಟದ ಮಾನಸಿಕ ಸ್ಥಿತಿ ಭಕ್ತನಲ್ಲಿ ಉಂಟಾಗುತ್ತದೆ. ಅದನ್ನೇ ಭಕ್ತಿ ಎಂದು ಕರೆಯುವುದು. ಇದು ಮುಕ್ತಿಗಿಂತಲೂ ಅಮೂಲ್ಯವಾದುದು. ಜಠರಾಗ್ನಿ ಆಹಾರವನ್ನು ದಹಿಸಿ ಜೀರ್ಣಿಸಿಕೊಂಡುಬಿಡುತ್ತದೆ. ಹಾಗೆಯೇ ಇಂಥ ಭಕ್ತಿ, ಮಾನವನ ಅಜ್ಞಾನದ ಆವರಣವನ್ನು ಕರಗಿಸಿಬಿಡುತ್ತದೆ. (*ಭಾಗವತ,* ೩ : ೨೫: ೩೨–೩೩)

ಇಲ್ಲಿ ವ್ಯಕ್ತಿತ್ವದ ಎಲ್ಲ ಅಂಶಗಳನ್ನು ಒಟ್ಟುಗೂಡಿಸಿ, ಭಗವಂತನೆಡೆಗೆ ಸಂಪೂರ್ಣವಾಗಿ ಅನಾಯಾಸವಾಗಿ ಹರಿಸುವುದನ್ನೇ ಭಕ್ತಿ ಎಂದು ವಿವರಿಸಿದ್ದಾರೆ. ನಾವು ಜ್ಞಾನಾಂಗಗಳ ಮೂಲಕ ಪ್ರಾಪಂಚಿಕ ಅನುಭವಗಳನ್ನು ಪಡೆದುಕೊಳ್ಳುತ್ತೇವೆ. ಆ ಎಲ್ಲ ಅನುಭವಗಳು ಭಗವಂತನ ಭಾವವೆಂಬ ಗಾಜಿನ ಮೂಲಕ ಹಾದುಹೋಗಬೇಕು. ಆಗ ಆ ಎಲ್ಲ ಅನುಭವಗಳಲ್ಲಿರುವ ಭಗವದಂಶ ನಮಗೆ ಗೋಚರವಾಗುತ್ತದೆ. ನಾವು ಕರ್ಮಾಂಗಗಳ ಮೂಲಕ ಕೆಲಸಕಾರ್ಯಗಳನ್ನು ಮಾಡುತ್ತೇವೆ. "ಇವೆಲ್ಲವನ್ನೂ ನನ್ನ ಲೌಕಿಕ ಒಡೆಯನಿಗೂ ಒಡೆಯನಾದ, ಲೋಕವನ್ನಾಳುವ ಪ್ರಭುವಿಗಾಗಿ ಮಾಡುತ್ತಿದ್ದೇನೆ. ಅವನನ್ನು ತೃಪ್ತಿಪಡಿಸಲೆಂದೇ ನಾನು ಕೆಲಸ ಮಾಡುವುದು. ನನ್ನ ಕೆಲಸ ಕೇವಲ ಹಣ ಸಂಪತ್ತಿನ ಗಳಿಕೆಗಾಗಿ ಅಲ್ಲ" – ಈ ಮನೋಭಾವನೆಯಿಂದ ನಮ್ಮ ಕರ್ತವ್ಯಗಳನ್ನು ನಿರ್ವಹಿಸಬೇಕು. ಆಗ ನಮ್ಮೆಲ್ಲ ಕಾರ್ಯಗಳಿಗೆ ಉದಾತ್ತ ಉದ್ದೇಶ ಪ್ರಾಪ್ತವಾಗುತ್ತದೆ. ಹಾಗೆಯೇ ಮನಸ್ಸು ಕೂಡ. ಮನಸ್ಸು ಕೆಲಸಕ್ಕೆ ಬಾರದ ಅನೇಕ ಆಲೋಚನೆಗಳಲ್ಲಿ ತೊಡಗಿರುತ್ತದೆ. ಇದರಿಂದ ಅದರ ಶಕ್ತಿ ಪೋಲಾಗುತ್ತಲೇ ಇರುತ್ತದೆ. ಆ ಮನಸ್ಸನ್ನು ಭಗವಂತನ

ಮಹಿಮೆಯನ್ನು ಕೇಳುವುದರಲ್ಲಿ ತೊಡಗಿಸಬೇಕು; ಆತನ ಸ್ಮರಣೆಯಲ್ಲಿ ವಿನಿಯೋಗಿಸಬೇಕು. ಸದ್ಯ ನಮ್ಮ ಮನಸ್ಸು ಪ್ರಪಂಚದ ವಸ್ತುಗಳ ಇರುವಿಕೆಯನ್ನೇ ಸದಾ ಭಾವಿಸುತ್ತಿದೆ. ಮೇಲೆ ಹೇಳಿದ ರೀತಿ ಮಾಡಿದರೆ, ಭಗವಂತನ ಸಾನ್ನಿಧ್ಯವನ್ನು ಪರಿಭಾವಿಸುತ್ತದೆ.

ಹೀಗೆ ಜ್ಞಾನಾಂಗಗಳು, ಕರ್ಮಾಂಗಗಳು, ಮನಸ್ಸು – ಇವುಗಳ **ಅನುಭವದ ಶಕ್ತಿ, ಕಾರ್ಯಶಕ್ತಿ, ಆಲೋಚನಾಶಕ್ತಿ** – ಇವೆಲ್ಲ ಒಟ್ಟುಗೂಡಿದಾಗ, ಅದ್ಭುತವಾದ ಏಕಾಗ್ರತಾಶಕ್ತಿ ಉತ್ಪನ್ನವಾಗುತ್ತದೆ. ಎಳೆಗಳು ಸೇರಿ ದಾರವಾದಂತೆ ದೃಢತೆಯನ್ನು ಪಡೆದುಕೊಳ್ಳುತ್ತವೆ; ನದಿಗಳು ಸೇರಿ ಸಮುದ್ರವಾದಂತೆ ಅವುಗಳ ಪರಿಧಿ, ವ್ಯಾಪ್ತಿಗಳು ವಿಶಾಲಗೊಳ್ಳುತ್ತವೆ.

ಇದನ್ನು ನಾವು ಭಗವಂತನೆಡೆಗೆ ಹರಿಸಬೇಕು. ಅಂದರೆ ಜ್ಞಾನೇಂದ್ರಿಯಗಳ **ಅನುಭವಗ್ರಹಿಕೆ** ಭಗವದ್ಭಾವದ ಮೂಲಕ ಆಗಬೇಕು. ಕರ್ಮೇಂದ್ರಿಯಗಳ **ಕಾರ್ಯಗಳೆಲ್ಲ** ಭಗವದಾರಾಧನೆಗೆ ಮುಡಿಪಾಗಿರಬೇಕು. ಮನಸ್ಸಿನ **ಆಲೋಚನೆಗಳೆಲ್ಲ** ಭಗವಂತನ ಸಾನ್ನಿಧ್ಯದ ಸಮಾನ ಅಂಶದಿಂದ ರಂಜಿತವಾಗಿರಬೇಕು. ಇದೇ ಭಕ್ತಿ.

ಇವುಗಳು ನಮ್ಮ ಉಸಿರಾಟದಂತೆಯೇ, ಸಹಜವಾಗಿ ಸರಾಗವಾಗಿ, ಅವಿನಾಭಾವವಾಗಿ ನಮ್ಮ ಜೀವನಪದ್ಧತಿಯಲ್ಲಿ ಮಿಳಿತವಾಗಬೇಕು. ಭಕ್ತಿಯ ಸಾಧನೆಗೆ ನಾವು ಬೇರೆ ಯಾವುದೋ ಜೀವನವಿಧಾನವನ್ನು ಅನುಸರಿಸಬೇಕಾಗಿಲ್ಲ. ಅದು ನಾವಿರುವ ಪರಿಸ್ಥಿತಿಯಲ್ಲಿ ಸಾಧ್ಯವೂ ಇಲ್ಲ. ನಮ್ಮ ಈ ಬೆಂಡಾದ ಬದುಕಿಗೆ ಭಕ್ತಿಯೆಂಬ ಪುಣ್ಯ ವಾಹಿನಿಯನ್ನು ಪ್ರವಹಿಸಿದರೆ ಸಾಕು. ಇದರಿಂದ ನಮ್ಮ ಬದುಕಿನ ಮೌಲ್ಯಗಳಲ್ಲಿ ಗಂಭೀರ ಗುಣಾತ್ಮಕ ಪರಿವರ್ತನೆಯುಂಟಾಗುತ್ತದೆ. ಈಗ ನಮಗೆ ಹಣ ಮುಖ್ಯವಾಗುವುದಿಲ್ಲ; ಪ್ರೀತಿ ಮುಖ್ಯವಾಗುತ್ತದೆ. ಅಧಿಕಾರ ಮುಖ್ಯವಾಗುವುದಿಲ್ಲ; ಭಗವದಾರಾಧನೆಯೇ ಪ್ರಮುಖವಾಗುತ್ತದೆ. ಈ ಜಗತ್ತು ಮುಖ್ಯವಾಗುವುದಿಲ್ಲ; ಭಗವಂತನೇ ಮುಖ್ಯನಾಗುತ್ತಾನೆ.

ಹೀಗೆ ಭಕ್ತಿಯನ್ನು ಸಮಗ್ರ ಜೀವನಸಿದ್ಧಾಂತವಾಗಿ ಭಾಗವತ ಬಣ್ಣಿಸುತ್ತದೆ. ಶ್ರೀರಾಮಕೃಷ್ಣರು ಹೇಳುವಂತೆ, ಸುತ್ತುತ್ತಿರುವ ಹುಡುಗನಿಗೆ ಕಂಬ ಆಧಾರವಾಗಿರುವಂತೆ, ನಮ್ಮ ಧಾವಂತದ ಬದುಕಿಗೆ ದೇವರು ಆಧಾರವಾಗಬೇಕು. ಇದೇ ಭಾಗವತದ ಆಶಯ.

## ಅಂಬರೀಷನ ಆದರ್ಶ

ಈ ಹಿನ್ನೆಲೆಯಲ್ಲಿ ಅನೇಕ ಭಾಗವತೋತ್ತಮರನ್ನು ಭಾಗವತ ನಮಗೆ ಪರಿಚಯಿಸುತ್ತದೆ. ನಾರದ, ಧ್ರುವ, ಪ್ರಹ್ಲಾದ, ಜಡಭರತ ಮುಂತಾದ ಮಹಾನ್ ಭಕ್ತರ ನಿದರ್ಶನಗಳು ನಮಗೆ ಅಲ್ಲಿ ದೊರೆಯುತ್ತವೆ. ಅವರಲ್ಲೆಲ್ಲಾ ಅಂಬರೀಷನ ವ್ಯಕ್ತಿತ್ವ ವಿಶಿಷ್ಟ ವಾದುದು. ಅವನು ಒಬ್ಬ ಗೃಹಸ್ಥ. ಮೇಲಾಗಿ ರಾಜ. ಅಧಿಕಾರ–ಭೋಗಗಳಿಗೆ ಒಡೆಯ. ಇಷ್ಟಿದ್ದರೂ ಅವೆಲ್ಲವನ್ನೂ ಸ್ವಪ್ನದಂತೆ ಎಂದು ಅವನು ಭಾವಿಸಿಕೊಂಡಿದ್ದನಂತೆ. ಸ್ವಾರಸ್ಯವೆಂದರೆ, ಸಂಪತ್ತು ಕಡಮೆಯಾದರೂ ದುಃಖವೇ, ಹೆಚ್ಚಾದರೂ ದುಃಖವೇ ಎಂದು ನಂಬಿಕೊಂಡಿದ್ದನಂತೆ.

ಈ ಬಗೆಯ ಸಮತ್ವಬುದ್ಧಿಗೆ ಕಾರಣ ಅವನ ಭಕ್ತಿಭಾವ. ಅವನಿಗೆ ಭಗವಂತನಾದ ವಾಸುದೇವನಲ್ಲಿ ನಿರತಿಶಯವಾದ ಪ್ರೇಮ. ಸಾಧುಗಳಾದ ವಾಸುದೇವನ ಭಕ್ತರಲ್ಲಿ ಅವಿರತವಾದ ಪ್ರೀತಿ. ಆ ಪ್ರೇಮ–ಪ್ರೀತಿಗಳನ್ನು ತನ್ನ ಸಾಧನೆಯ ಮೂಲಕ ಅವನು ಬೆಳೆಸಿಕೊಳ್ಳುತ್ತ ಇದ್ದನು. ಹಾಗೆಂದೇ ಇಡೀ ಜಗತ್ತನ್ನು ತುಚ್ಛವಾಗಿ ಕಾಣುವ ವೈರಾಗ್ಯಭಾವವನ್ನು ತಳೆದಿದ್ದನು.

ಅವನ ಜೀವನಚರ್ಯೆ ನಾವು ಇದೀಗ ತಾನೇ ಓದಿಕೊಂಡ ಭಕ್ತಿಯ ವ್ಯಾಖ್ಯಾನಕ್ಕೆ ಪ್ರತ್ಯಕ್ಷ ನಿದರ್ಶನ. ಅದನ್ನು ಭಾಗವತವು ಹೀಗೆ ಸೊಗಸಾಗಿ ವರ್ಣಿಸುತ್ತದೆ :

" ಅಂಬರೀಷನ ಮನಸ್ಸು ಶ್ರೀಕೃಷ್ಣನ ಪಾದಾರವಿಂದಗಳನ್ನು ಯಾವಾಗಲೂ ಧ್ಯಾನಿಸುತ್ತದೆ; ಆತನು ತನ್ನ ಮಾತುಗಳ ಮೂಲಕ ಯಾವಾಗಲೂ ಭಗವದ್ಧಾಮವಾದ ವೈಕುಂಠದ ಗುಣವರ್ಣನೆಯನ್ನೇ ಮಾಡುತ್ತಾನೆ; ಆತನ ಕೈಗಳು ಶ್ರೀಹರಿಯ ಮಂದಿರವನ್ನು ಶುದ್ಧಮಾಡು ವುದರಲ್ಲಿಯೇ ತೊಡಗಿರುತ್ತವೆ; ಅವನು ಭಗವಂತನಾದ ಅಚ್ಯುತನ ಸತ್ಕವಾದ ಕಥೆಗಳನ್ನು ಕೇಳುವುದರಲ್ಲಿಯೇ ತೊಡಗಿರುತ್ತಾನೆ; ಅವನು ತನ್ನ ಕಣ್ಣುಗಳಿಂದ ಮುಕುಂದನ ಪುಣ್ಯಪ್ರತಿಮೆಗಳಿಂದ ಕೂಡಿದ ಮಂದಿರಗಳನ್ನು ಮಾತ್ರ ದರ್ಶಿಸುತ್ತಿರುತ್ತಾನೆ; ಅವನು ಸ್ಪರ್ಶಿಸುವುದು ಭಗವದ್ಭಕ್ತರ ಪಾದಾರವಿಂದಗಳನ್ನು ಮಾತ್ರ. ಅವನು ಮೂಸಿ ನೋಡುವುದು ಭಗವದಾರಾಧನೆಗೆ ಉಪಯೋಗಿಸಿದ ತುಳಸಿಯ ಸೌರಭವನ್ನು. ಆತನು ಸೇವಿಸುವುದು ಭಗವಂತನ ಪ್ರಸಾದವನ್ನು. ಅವನು ಕಾಲುಗಳಿಂದ ಯಾವಾಗಲೂ ಶ್ರೀಹರಿಯ ಪೂಜಾಸ್ಥಾನಗಳಿಗೆ ತೀರ್ಥಯಾತ್ರೆಗೆ ಹೋಗುತ್ತಿರುತ್ತಾನೆ. ಅವನ ಶಿರವು ಭಗವಂತನಿಗೆ ನಮಿಸಲೆಂದೇ ಎಲ್ಲೆಡೆಯೂ ಬಾಗಿರುತ್ತದೆ. ಯಾವ ಕಾಮನೆಯೂ ಇಲ್ಲದೆ ಭಗವಂತನನ್ನು ಸೇವೆ ಮಾಡಬೇಕೆಂಬುದೇ ಅವನ ಏಕೈಕ ಬಯಕೆ. ಹೀಗೆ ಅಂಬರೀಷನು ಭಗವಂತನಲ್ಲೂ ಆತನ ಭಕ್ತರಲ್ಲೂ ರತಿಯನ್ನು ಹೊಂದುವ ಬಗೆಯಲ್ಲಿ ಬಾಳಿದನು." (*ಭಾಗವತ*, ೯:೪: ೧೮–೨೦)

ಎಂಥ ಅದ್ಭುತ ವ್ಯಕ್ತಿತ್ವ ಅಂಬರೀಷನದು! ಎಂಥ ಪಾವನ ಚಾರಿತ್ರ್ಯ ಅವನದು! ಅವನ ಅಂಗಾಗಗಳೆಲ್ಲವೂ ಹರಿಸ್ಮರಣೆಯಲ್ಲಿ, ಹರಿಯ ಸೇವೆಯಲ್ಲಿ ತೊಡಗಿದ್ದವು. ಅವನ ಎಲ್ಲ ಚಟುವಟಿಕೆಗಳೂ ಹರಿಯ ಆರಾಧನೆಗೇ ಮೀಸಲಾಗಿದ್ದವು. ಭಕ್ತಿ ಎಂಬ ಏಕಮೇವ ಪಾವನಗಂಗೆಯೇ, ಅವನ ದೈನಂದಿನ ಜೀವನದ ಹಲವು ಕವಲುಗಳಲ್ಲಿ ಹರಿದು ಅವನ ಜೀವಿತವನ್ನೆಲ್ಲ ಪವಿತ್ರಗೊಳಿಸಿತ್ತು.

## ನವವಿಧ ಭಕ್ತಿ

ಅಂಬರೀಷನ ಆದರ್ಶವು ಭಕ್ತಿಸಾಧನೆಯ ಪ್ರಾಯೋಗಿಕ ಮಜಲನ್ನು ನಮಗೆ ತೆರೆದಿಡುತ್ತದೆ. ಭಕ್ತಿಯೆಂಬುದು ಒಂದೇ. ಆದರೆ ಅದು ಹಲವು ರೀತಿಗಳಲ್ಲಿ ಸಹಜರೀತಿಯಲ್ಲಿ ಅಭಿವ್ಯಕ್ತವಾಗುವುದನ್ನು ಅಂಬರೀಷನ ಉದಾಹರಣೆಯಲ್ಲಿ ನೋಡುತ್ತೇವೆ. ಅದು ಮುಖ್ಯವಾಗಿ ಒಂಬತ್ತು ಬಗೆ ಎಂದು ಭಾಗವತ ಹೇಳುತ್ತದೆ: **ಶ್ರವಣ, ಕೀರ್ತನ, ಸ್ಮರಣ, ಪಾದಸೇವನ, ಅರ್ಚನ, ವಂದನ, ದಾಸ್ಯ, ಸಖ್ಯ, ಆತ್ಮನಿವೇದನ.** ಈ ಎಲ್ಲ ಕ್ರಿಯೆಗಳನ್ನೂ ಶ್ರೀಹರಿಗೆ ಮೀಸಲಾಗಿ ಕೈಗೊಂಡರೆ ಅದು ಭಕ್ತಿ ಅನ್ನಿಸಿಕೊಳ್ಳುತ್ತದೆ.

**ಶ್ರವಣ:** ಭಾಗವತದ ಪ್ರಕಾರ ಭಗವತ್ಕಥೆಯು ಶಬ್ದರೂಪದಲ್ಲಿರುವ ಭಗವಂತನೇ ಸರಿ. ಅದನ್ನು ಕೇಳುವವನ ಕಿವಿಯ ಮೂಲಕ ಶಬ್ದರೂಪೀ ಭಗವಂತನೇ ಭಕ್ತನ ಹೃದಯ ಸರೋವರವನ್ನು ಪ್ರವೇಶಿಸುತ್ತಾನೆ. ಭಕ್ತನ ಮನಸ್ಸಿನಲ್ಲಿರುವ ಕಶ್ಮಲಗಳೆಲ್ಲವನ್ನೂ, ಶರತ್ಕಾಲದ ಮಳೆಯು ನೀರಿನ ಕೆಸರನ್ನೆಲ್ಲ ಕಳೆಯುವಂತೆ ತೊಳೆಯುತ್ತಾನೆ. ನಮ್ಮೆಲ್ಲ ಧರ್ಮಕಾರ್ಯಗಳೂ ಭಗವಂತನ ಚರಿತ್ರೆಯನ್ನು ಕೇಳಬೇಕೆಂಬ ಇಚ್ಛೆಯನ್ನು ನಮ್ಮಲ್ಲಿ ಮೂಡಿಸಬೇಕು. ಇಲ್ಲದಿದ್ದರೆ ಅವು ವ್ಯರ್ಥ.

**ಕೀರ್ತನ:** ಭಾಗವತದಲ್ಲಿ ನಾರದನು ಹೀಗೆ ಹೇಳುವನು: "ಶ್ರೀಕೃಷ್ಣನು ಕೇಳುವುದಕ್ಕೆ ಪ್ರಿಯವಾದ ಚರಿತ್ರೆ ಉಳ್ಳವನು. ಆತನ ಚರಿತ್ರೆಗಳನ್ನು ನಾನು ಕೀರ್ತನೆ ಮಾಡುತ್ತಿರುವಾಗ, ಅವನು ಕರೆದವನಂತೆ ನನ್ನ ಹೃದಯದಲ್ಲಿ ಬಂದು ಕುಳಿತುಕೊಳ್ಳುವನು."

**ಸ್ಮರಣ:** ಭಾಗವತವು ಭಗವಂತನ ಸ್ಮರಣೆಯ ಮಹತ್ವವನ್ನು ಹೀಗೆ ಹೇಳುತ್ತದೆ: "ಭಗವಂತನೇ ಸನಕಾದಿ ಮುನಿಗಳಿಗೆ ಹೀಗೆ ಯೋಗ ಮಾರ್ಗವನ್ನು ಉಪದೇಶಿಸಿದನು: 'ಎಲ್ಲ ಕಡೆಗಳಿಂದ ಮನಸ್ಸನ್ನು ಸೆಳೆದು, ನನ್ನಲ್ಲೇ ನೆಲೆಗೊಳಿಸಬೇಕು.' " ಜ್ಞಾನಯೋಗದಿಂದಾಗಲಿ, ಧ್ಯಾನದಿಂದಾಗಲಿ, ಸ್ವಧರ್ಮಪರಿಪಾಲನೆಯಿಂದಾಗಲಿ ನಾವು ಏನನ್ನು ಪಡೆದುಕೊಳ್ಳಲು ಪ್ರಯತ್ನಿಸಬೇಕು? **ಅಂತೇ ನಾರಾಯಣ ಸ್ಮೃತಿಃ** – ಕೊನೆಗೂ ನಾರಾಯಣನ ಸ್ಮರಣೆಯನ್ನು ಮಾತ್ರವೇ.

**ಪಾದಸೇವನ:** ಭಾಗವತವು ಇಡೀ ಸೃಷ್ಟಿಯೇ ಭಗವಂತನ ಪಾದವಾಗಿದೆ ಎಂದು ಹೇಳುವುದು. ಹೀಗಾಗಿ ನಿಸ್ವಾರ್ಥರೀತಿಯ ಲೋಕಸೇವೆಯೇ ಭಗವಂತನ ಸೇವೆಯೂ ಆಗುತ್ತದೆ. ಇದು ಭಾಗವತ ನಮ್ಮ ಮುಂದೆ ಇಡುವ ಮಹಾನ್ ಆದರ್ಶ.

**ಅರ್ಚನ:** ಚಿತ್ತದ ಉಪಶಮನವೇ ಯೋಗದ ಉದ್ದೇಶ. ಇದಕ್ಕೆ ಸುಗಮವಾದ ಮಾರ್ಗ ಭಗವಂತನ ಅರ್ಚನೆ ಎಂದು ಭಾಗವತದ ಅಭಿಪ್ರಾಯ. ಇದನ್ನು ಆಚರಿಸುವುದರಿಂದ ನಮ್ಮ ಹೃದಯದಲ್ಲಿ ಆನಂದದ ಭಾವ ಸ್ಫುರಿಸುತ್ತದೆ.

**ವಂದನ:** ಭಾಗವತದಲ್ಲಿ ಬರುವ ಒಂದು ಪ್ರಸಂಗ ಸೊಗಸಾಗಿದೆ. ಕಂಸನ ಆದೇಶದಂತೆ ಅಕ್ರೂರ, ಕೃಷ್ಣ ಬಲರಾಮರನ್ನು ಕರೆತರಲು ಮಥುರೆಯಿಂದ ಗೋಕುಲಕ್ಕೆ ಬಂದಿದ್ದಾನೆ. ಅವನಿಗೆ ಅತ್ಯಂತ ಆನಂದವಾಗಿದೆ. ಹೀಗೆ ಉದ್ಗರಿಸುತ್ತಿದ್ದಾನೆ: " ನಾನು ಭಗವತ್ ಸ್ವರೂಪಿಯಾದ ಶ್ರೀಕೃಷ್ಣನ ಪಾದಪದ್ಮಗಳಿಗೆ ನಮಸ್ಕರಿಸುತ್ತೇನೆ. ಯೋಗಿಗಳು ಧ್ಯಾನಿಸುವ ಪಾದಯುಗ್ಮಗಳು ಅವು. ಇದರಿಂದ ನನ್ನನ್ನು ಆವರಿಸಿರುವ ಅಶುಭಗಳೆಲ್ಲ ನಶಿಸಿಹೋಗುತ್ತವೆ. ನನ್ನ ಜನ್ಮ ಸಾರ್ಥಕವಾಗುತ್ತದೆ."

ಭಗವಂತನಿಗೆ ಎಲ್ಲಿ ನಮಸ್ಕರಿಸಬೇಕು? ಭಾಗವತದ ಪ್ರಕಾರ, ಈ ಸೃಷ್ಟಿಯ ಚರಾಚರ ವಸ್ತುಗಳೂ ಭಗವಂತನಿಂದ ಬೇರೆ ಅಲ್ಲ. ಅವೆಲ್ಲವೂ ಭಗವಂತನ ಶರೀರದ ಅಂಗಗಳೇ ಆಗಿವೆ. ಆಕಾಶ–ವಾಯು–ಅಗ್ನಿ–ಜಲ–ಭೂಮಿ–ಸೂರ್ಯನೇ ಮುಂತಾದ ನಕ್ಷತ್ರಲೋಕಗಳು, ಎಲ್ಲ ಜೀವಜಂತುಗಳು, ದಿಕ್ಕುಗಳು, ಮರಗಿಡಗಳು, ಸರೋವರಗಳು, ಸಮುದ್ರಗಳು ಇವೆಲ್ಲವೂ ಶ್ರೀಹರಿಯ ಶರೀರದ ಅಂಗಗಳೇ ಆಗಿವೆ. ಆದ್ದರಿಂದ ಭಕ್ತನಾದವನು ಇವೆಲ್ಲವನ್ನೂ ಭಗವಂತನ ಸ್ವರೂಪವೆಂದೇ ಅರಿತು, ಅವೆಲ್ಲವನ್ನೂ ಪೂಜ್ಯಭಾವದಿಂದ ನೋಡುತ್ತ ವಂದಿಸಬೇಕು. ಹೀಗೆ ಭಗವಂತನ ವಿರಾಟ್ ಸ್ವರೂಪವನ್ನು ಭಾಗವತವು ನಮ್ಮ ಮುಂದೆ ಇಡುತ್ತದೆ.

**ದಾಸ್ಯ:** "ಭಗವಂತ, ನಾರಾಯಣ, ಇವೆಲ್ಲವೂ ನಿನಗೆ ಸಮರ್ಪಿತ ವಾಗಲಿ" ಎಂಬ ಭಾವದಿಂದ, ನಮ್ಮ ಸ್ವಭಾವಕ್ಕೆ ಅನುಗುಣವಾಗಿ ನಮ್ಮ ಶರೀರ, ಮಾತು, ಮನಸ್ಸು, ಬುದ್ಧಿ, ಅರಿವು – ಇವುಗಳೆಲ್ಲ ದರಿಂದ ಏನೇನು ಮಾಡುತ್ತೇವೆಯೋ, ಅವೆಲ್ಲವನ್ನೂ ನಾವು ಭಗವಂತನಿಗೆ ಸಮರ್ಪಿಸಿಬಿಡಬೇಕು. ಇದು ಭಾಗವತವು ಬೋಧಿಸುವ ಪರಿಪೂರ್ಣ ದಾಸ್ಯಭಾವ.

**ಸಖ್ಯ:** ಸಖ್ಯಭಾವವನ್ನು ಭಾಗವತ ಹೀಗೆ ಪ್ರಶಂಸಿಸುತ್ತದೆ: "ನಂದ ಮಹಾರಾಜನ, ಗೋಪಬಾಲಕರ ಮತ್ತು ವ್ರಜಭೂಮಿಯ ನಿವಾಸಿಗಳ ಭಾಗ್ಯವೇ ಭಾಗ್ಯ. ಪರಮಾನಂದ ಸ್ವರೂಪನೂ, ಪೂರ್ಣಬ್ರಹ್ಮನೂ ಸನಾತನನೂ ಆದ ಶ್ರೀಕೃಷ್ಣನನ್ನೇ ಅವರು ತಮ್ಮ ಸ್ನೇಹಿತನನ್ನಾಗಿ ಪಡೆದರು."

**ಆತ್ಮನಿವೇದನ:** "ಜೀವಿಯು ಸಮಸ್ತ ಕರ್ಮಗಳನ್ನು ಸಮರ್ಪಿಸಿ ನನ್ನಲ್ಲಿ ಶರಣಾದರೆ ಮಾತ್ರ ಅಮೃತತ್ವವನ್ನು ಹೊಂದಿ ನನ್ನಲ್ಲಿ ಒಂದಾಗುತ್ತಾನೆ." – ಇದು ಭಗವಂತನು ಭಾಗವತದಲ್ಲಿ ಆಡುವ ನುಡಿ. ವೇದಗಳು ಧರ್ಮ–ಅರ್ಥ–ಕಾಮ–ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳನ್ನು ಬೋಧಿಸುತ್ತವೆ. ಇವೆಲ್ಲದರ ಸಾರ, ಭಾಗವತದ ಪ್ರಕಾರ – **ಅರ್ಪಣಂ ಸ್ವಸುಹೃದಃ ಪರಮಸ್ಯ ಪುಂಸಃ** – ಮಾನವನು ತನ್ನ ನಿರಂತರ ಹಿತಾಕಾಂಕ್ಷಿಯಾದ ಭಗವಂತನಲ್ಲಿ ತನ್ನನ್ನು ತಾನು ಅರ್ಪಿಸಿಕೊಳ್ಳುವುದು.

## ಉಪಸಂಹಾರ

ಭೌತಿಕತೆಯ ಕರಾಳಮುಷ್ಟಿಯಲ್ಲಿ ಸಿಲುಕಿ ನಮ್ಮ ಚೇತನದ ಪ್ರಕಾಶವು ಅಡಗಿಹೋಗಿದೆ. ಜಡದ ಸತತ ಸಂಪರ್ಕದಲ್ಲಿ ನಮ್ಮ ಸಹಜ ಪ್ರೇಮಭಾವ ಬತ್ತಿಹೋಗಿದೆ. ಈ ಹತಾಶ ಹಾಗೂ ಅಸಹಾಯಕ ಪರಿಸ್ಥಿತಿಯಲ್ಲಿ ಭಗವಂತನ ಕರುಣೆಗಾಗಿ ನಾವು ಹೃದಯಾಂತರಾಳದಿಂದ ಪ್ರಾರ್ಥಿಸಬೇಕು. ಅಂಥ ಒಂದು ಭಾವವಿಹ್ವಲಿತ ಪ್ರಾರ್ಥನೆಯನ್ನು ಭಾಗವತದಲ್ಲಿ ಮುಚುಕುಂದನೆಂಬ ಭಕ್ತನು ಮಾಡುತ್ತಾನೆ. ಈ ಪ್ರಾರ್ಥನೆಯೇ ಭಗವಂತನಲ್ಲಿ ನಮ್ಮ ಅನುದಿನದ ಅನುಕ್ಷಣದ ಮೊರೆಯಾಗಬೇಕು. ಏಕೆಂದರೆ ಅವನು ತನ್ನ ಈ ಕೆಳಗಿನ ಪ್ರಾರ್ಥನೆಯಲ್ಲಿ ಪ್ರತಿಧ್ವನಿಸುತ್ತಿರುವುದು ನಮ್ಮ ದುರ್ಬರ ಪರಿಸ್ಥಿತಿಯನ್ನೇ; ಅಂತರಂಗದ ಅದಮ್ಯ ಬಯಕೆ, ತವಕ ಮತ್ತು ವ್ಯಾಕುಲತೆಗಳನ್ನೇ.

**"ಓ ಪ್ರಭೂ! ನಿನ್ನ ಪಾದಕಮಲಗಳಲ್ಲಿ ನಾನು ಶರಣು ಬಂದಿದ್ದೇನೆ. ಇದುವರೆಗೂ ಜೀವನದ ಅನೇಕ ಕಷ್ಟಗಳಿಂದ ಬೆಂದುಹೋಗಿದ್ದೇನೆ. ಅದರಿಂದ ಉಂಟಾದ ವೇದನೆಯನ್ನು ನಾನು ಅನುಭವಿಸುತ್ತಿದ್ದೇನೆ. ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳೆಂಬ ಆರು ಶತ್ರುಗಳನ್ನು ಜಯಿಸಲಾರದೆ ಆಸೆಯ ಬುದ್ಧಿಯಿಂದ ಬಳಲುತ್ತಿದ್ದೇನೆ. ನೀನೇ ನನಗೆ ಗತಿ. ನನಗೆ ಅಭಯವನ್ನೂ ಅಮೃತತ್ವವನ್ನೂ, ಸಂತೋಷವನ್ನೂ ಕೊಟ್ಟು ಕಾಪಾಡು, ಪ್ರಭೂ."**